ನಮ್ಮ ಅರಿವಿನ ಮಿತಿ

ನಮ್ಮ ಬದುಕಿನಲ್ಲಿ ಅರಿವು ಎಂಬುದು ಬಹಳ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣ, ವೃತ್ತಿ, ಬೆಳವಣಿಗೆ, ಜ್ಞಾನದ ಆವಿಷ್ಕಾರ – ಎಲ್ಲವೂ ಒಂದಲ್ಲ ಒಂದು ರೀತಿ ಅರಿವಿನ ಪ್ರಕ್ರಿಯೆಯನ್ನೇ ಅವಲಂಬಿಸುತ್ತವೆ. ಇಂಥ ಅರಿವು ಆಧ್ಯಾತ್ಮಿಕ ಜಗತ್ತಿನಲ್ಲಿ ಯಾವ ಸ್ವರೂಪವನ್ನು ಪಡೆದುಕೊಳ್ಳುತ್ತದೆ? ಈ ಪ್ರಶ್ನೆ ಹಲವು ಬಗೆಯ ಸಮಸ್ಯೆಗಳನ್ನು ತಂದೊಡ್ಡುತ್ತವೆ; ಅಂತೆಯೇ ಅರಿವನ್ನು ಕುರಿತ ಸೂಕ್ಷ್ಮ ವಿಶ್ಲೇಷಣೆಗೂ ದಾರಿ ಮಾಡಿಕೊಡುತ್ತವೆ.

ಅರಿವು: ಅದರ ಮಹತ್ವವೇನು?

ನಮ್ಮೆಲ್ಲರ ಅನುಭವಕ್ಕೆ ನಿಲುಕುವ ಒಂದು ವಿಚಾರವನ್ನು ತೆಗೆದುಕೊಳ್ಳೋಣ. ಒಂದು ವಸ್ತುವನ್ನು ನಾವು ಕಂಡಿಲ್ಲ, ಕೇಳಿಲ್ಲ, ಅದನ್ನು ಕುರಿತ ಯಾವ ಮಾಹಿತಿಯೂ ನಮಗಿಲ್ಲ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಆ ವಸ್ತು ನಮ್ಮ ಬಳಿಗೆ ಬಂತು. ಸ್ನೇಹಿತ ಅದನ್ನು ಉಡುಗೊರೆ ನೀಡಿ ಹೇಳಿದ, ''ನಿನಗೇ ಕಣೋ. ವಿದೇಶದಿಂದ ತಂದಿದ್ದೇನೆ. ತೆಗೆದುಕೋ.'' ಅರ್ಥವಾಗದೆ ನಾನು ತಲೆ ಅಲ್ಲಾಡಿಸಿ ಕೇಳುತ್ತೇನೆ, ''ಏನಿದು? ಇದರ ಹೆಸರೇನು?'' ಆತ ಉತ್ತರಿಸುತ್ತಾನೆ, ''ಗ್ಲುಕೋಮೀಟರ್ ಅನ್ನುತ್ತಾರೆ. ನಿನ್ನ ರಕ್ತದಲ್ಲಿರುವ ಸಕ್ಕರೆ ಪ್ರಮಾಣ ಅಳೆಯುತ್ತದೆ.'' ''ಹೌದೆ? ಆಶ್ಚರ್ಯ!'' ಎನ್ನುತ್ತೇನೆ.

ಹೌದು, ಆಶ್ಚರ್ಯವೆ. ಹೊಸದಾಗಿ ಬರುವ ಜ್ಞಾನವೆಲ್ಲವೂ ಆಶ್ಚರ್ಯವೆ. ಇಲ್ಲಿಯತನಕ ತಿಳಿದಿರದ, ಹೊಸದಾಗಿ ನಮ್ಮ ಮನದಲ್ಲಿ ಬೆಳಕಿನಂತೆ ಮೂಡಿ ಬಂದ ಜ್ಞಾನ ಒಂದು ಅಚ್ಚರಿಯಲ್ಲದೆ ಮತ್ತೇನು? ಪ್ರತಿಯೊಂದು ಜ್ಞಾನವೂ ಅಷ್ಟೆ. ಅರಿವಿಗೆ ಮುನ್ನ ಏನೂ ಇಲ್ಲದ ಸ್ಥಿತಿ; ಆಮೇಲೆ 'ಏನೋ ಒಂದು ಇದೆ' ಎಂಬ ಮಬ್ಬುಮಬ್ಬಾದ, 'ಅದೊಂದು ಇದೆ' ಎಂಬ ಅರಿವನ್ನು ಕುರಿತು ಸೂಚನೆ ಮಾತ್ರ ಸಿಕ್ಕಿರುವ ಸ್ಥಿತಿ; ಕೊನೆಗೆ ಅರಿವು ಮೂಡಿದಾಗ ಎಲ್ಲವೂ ಬಯಲಾದ, ಮುಂಜಾನೆ ಬೆಳಕಾದಂತೆ ಎಲ್ಲವೂ ತಿಳಿಯಾದ ಒಂದು ಹರ್ಷದಾಯಕ ಕ್ಷಣ. ಕೆಲವೊಮ್ಮೆ ಸುಳಿವು, ಸೂಚನೆ ನೀಡುವ ಮಧ್ಯದ ಸ್ಥಿತಿ ಇರುವುದೇ ಇಲ್ಲ. ಧುತ್ತೆಂದು ಅರಿವು ಮಿಂಚಿನಂತೆ ಬಂದೆರಗುತ್ತದೆ. ಆಗ ನಮ್ಮ ಆಶ್ಚರ್ಯ, ಆನಂದಕ್ಕೆ ಮಿತಿಯಿಲ್ಲ. ಅನಿರೀಕ್ಷಿತವಲ್ಲವೆ ಇದು?

ನಮ್ಮ ಎಲ್ಲ ಜ್ಞಾನವೂ ಇದೇ ರೀತಿ ಹಲವು ಅರಿವುಗಳ ಸರಪಳಿ. ಎಲ್ಲಿ ಆರಂಭವಾಯಿತೋ, ಎಷ್ಟು ದೂರ ಕ್ರಮಿಸಿತೋ, ಎಲ್ಲಿ ಕೊನೆಯಾಗುವುದೋ ಹೇಳಲಾಗದ ರೈಲುಗಾಡಿಯಂಥ ಒಂದು ಪ್ರಯಾಣ — ನಮ್ಮ ಅರಿವಿನ ಗತಿ. ಬಾಲ್ಯದಲ್ಲಿ ಯಾವಾಗ ನಮ್ಮಲ್ಲಿ ಅರಿಯುವ ಪ್ರಕ್ರಿಯೆ ಆರಂಭವಾಯಿತು? ನಮ್ಮ ನೆನಪುಗಳು ಹಿಂದುಹಿಂದಕ್ಕೆ ಹೋದಷ್ಟೂ ಮಬ್ಬುಮಬ್ಬಾಗುತ್ತವೆ. ನಮ್ಮ ನೆನಪುಗಳಿಗೂ ದೂರ, ಇನ್ನೂ ಆಳದಲ್ಲಿ ಅರಿವಿನ ಪ್ರಕ್ರಿಯೆ ಆರಂಭವಾಗಿರಬೇಕು. ನಮ್ಮ ಮೆದುಳಿನ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ ಯಾವಾಗ? ಬಾಲ್ಯದಲ್ಲಿ 'ಬುದ್ಧಿ ಬಂದಾಗಿನಿಂದ' ಎಂದು ನಾವು ಹೇಳುವ ಕಾಲ ಎಂದು ಉಂಟಾಗುವುದು? ಅದಕ್ಕೂ ಮೊದಲೇ ನಮ್ಮಲ್ಲಿ ಅರಿಯುವ ಪ್ರಕ್ರಿಯೆ ಉಂಟಾಗುತ್ತದೆ. ಇದೊಂದು ಅಚ್ಚರಿಯ ಸಂಗತಿ. ಏನಿದ್ದರೂ, ಬಾಲ್ಯದಿಂದಲೇ ನಾವು ಹಲವು ಬಗೆಯ ಜ್ಞಾನಗಳನ್ನು ಒಂದಕ್ಕೊಂದು ಜೋಡಿಸುತ್ತ ಬೆಳೆದಿರುವ ಪ್ರಕ್ರಿಯೆ ಅತ್ಯಂತ ಆಶ್ಚರ್ಯಕರವಾದದ್ದು. ವರ್ಷಗಳು ಕಳೆದಂತೆ ಈ 'ಅರಿವಿನ ರೈಲುಗಾಡಿ' ಉದ್ದವಾಗುತ್ತ ಹೋಗುತ್ತದೆ. ಒಂದೊಂದು ಬೋಗಿ (ಅಂದರೆ ಜ್ಞಾನದ ತುಣುಕು) ಸೇರಿದಾಗಲೂ ಇಡೀ ರೈಲುಗಾಡಿಯ ಒಟ್ಟು ಸ್ವರೂಪವೇ ಬದಲಾಗುತ್ತದೆ. ಪ್ರತಿಕ್ಷಣವೂ ನಾವು ಹೊಸತನ್ನು ಅರಿಯುತ್ತಿರುತ್ತೇವೆ, ಅದೇ ರೀತಿ ಪ್ರತಿಕ್ಷಣವೂ ನಮ್ಮ ಒಟ್ಟು ಜ್ಞಾನದ ಅಸ್ತಿತ್ವವೇ ಬದಲಾಗುತ್ತದೆ. ಅಂದರೆ ನಾವು ಪ್ರತಿಕ್ಷಣವೂ ಬದಲಾಗುತ್ತಿರುತ್ತೇವೆ.

ಇದು ಯಾವ ಸೀಮೆಯ ತರ್ಕ? ನಾವು ಪ್ರತಿಕ್ಷಣವೂ ಬದಲಾಗುತ್ತೇವೆ, ನಮ್ಮ ಅರಿವು ಪ್ರತಿಕ್ಷಣವೂ ಹೊಸದಾಗಿ, ನಿರಂತರ ಮಾರ್ಪಾಡುತ್ತದೆ ಎಂದಾದರೆ, ನಮ್ಮಲ್ಲಿ ಸ್ಥಿರತೆ ಎಂಬುದಿಲ್ಲವೆ? 'ನಾನು' ಎಂದು ಏನನ್ನು ಕರೆಯಬೇಕು? ಪ್ರತಿಕ್ಷಣವೂ ಬದಲಾಗುತ್ತಿರುವ, ಹಿಡಿತಕ್ಕೆ ಸಿಗಲಾರದ 'ನಾನು' ಎಂಬುದು ಇರುವುದಾದರೂ ಎಲ್ಲಿ? — ಇಂಥ ಗೊಂದಲದ ಪ್ರಶ್ನೆಗಳು ಏಳುತ್ತವೆ. ನಮಗೆ ಅರಿವಿಲ್ಲದೆ ನಮ್ಮ ಅರಿವು ವಿಸ್ತಾರವಾಗುತ್ತದೆ. ಅದೇ ರೀತಿ, ನಮ್ಮನ್ನು ನಾವು 'ನಾನು' ಎಂದು ಗುರುತಿಸಿಕೊಳ್ಳುವ ಅಸ್ತಿತ್ವವೂ ಬದಲಾಗುತ್ತದೆ, ಇಂಥ ಬದಲಾವಣೆಯನ್ನು ನಮಗರಿವಿಲ್ಲದೆಯೇ ಒಪ್ಪಿಕೊಳ್ಳುತ್ತೇವೆ. ಇದೇ ಅರಿವಿನ ಮಹತ್ವ — ಅರಿವಿಲ್ಲದೇ ಅರಿವು ವಿಸ್ತಾರವಾಗುವುದು.

ಅರಿವಿನ ಬಗೆಗಳು

ಜ್ಞಾನಕ್ಕೆ ಕೊನೆಯೆಂಬುದಿಲ್ಲ ಎನ್ನುತ್ತಾರೆ, ಕಲಿತಷ್ಟೂ ಮುಗಿಯುವುದಿಲ್ಲ ; ಜಗತ್ತಿನ ಜ್ಞಾನಸಾಗರ ಎಂದೂ ಬತ್ತಿಹೋಗದು,

ಅದು ವಿಸ್ತಾರವಾಗುತ್ತಾ ಹೋಗುತ್ತದೆ. ಆದರೆ ಎಲ್ಲ ಅರಿವೂ ಒಂದೇ ರೀತಿಯದೆ? ಎಲ್ಲ ಜ್ಞಾನ ಪ್ರಕಾರಗಳೂ ಸಮಾನವೆ? ಅಧ್ಯಯನದ ಹಾಗೂ ಶಿಕ್ಷಣದ ಅನುಕೂಲತೆಗಳಿಗೆ ತಕ್ಕಂತೆ ಒಟ್ಟು ಜ್ಞಾನವನ್ನು ವಿಜ್ಞಾನ, ಭೂಗೋಳ, ಚರಿತ್ರೆ, ಗಣಿತ ಮುಂತಾದ ಶಾಖೆಗಳಾಗಿ ವರ್ಗೀಕರಿಸಲಾಗಿದೆ, ನಿಜ. ಅದೇ ರೀತಿ ಶೈಕ್ಷಣಿಕ ಕ್ಷೇತ್ರಗಳ ಹೊರಗೆ ಕೂಡ ಅಸಂಖ್ಯಾತ ಜ್ಞಾನಶಾಖೆಗಳು ಇವೆ. ಇವುಗಳಷ್ಟೇ ಅಲ್ಲದೆ, ಯಾರೂ ಗಮನಿಸದ ರೀತಿಯಲ್ಲಿ ನಾವು ಪ್ರತಿಕ್ಷಣವೂ ನೋಡಿ, ಕೇಳಿ, ಅನುಭವಿಸಿ ಅರಿತುಕೊಳ್ಳುವ ಜ್ಞಾನಗಳು ಅನೇಕ. ಇವು ನಮ್ಮ ಅರಿವಿನ ಅಗಾಧ ಸಮುದ್ರದಲ್ಲಿ ಒಂದೊಂದೇ ಹನಿಯಾಗಿ ಸೇರಿಕೊಳ್ಳುತ್ತವೆ. ಇವೆಲ್ಲ ಬಗೆಗಳನ್ನು ಒಟ್ಟಾಗಿ ಸೇರಿಸಿ 'ಪ್ರಾಪಂಚಿಕ ಅರಿವು' ಎನ್ನಬಹುದು. ಇವನ್ನು ಮೀರಿದ ಒಂದು ಅರಿವಿದೆ. ಅದು ಎಲ್ಲ ಅರಿವುಗಳನ್ನೂ ಮೀರಿದ, ಪ್ರಪಂಚದ ಆಚೆಗಿನ, ನಮ್ಮ ಇಂದ್ರಿಯ-ಮನಸ್ಸು-ಮಾತು-ಬುದ್ಧಿ ಇವುಗಳಾಚೆಗೆ ಇರುವ ಅರಿವು. ಇದನ್ನು **ಅಧ್ಯಾತ್ಮ ಜ್ಞಾನ** ವೆನ್ನುತ್ತೇವೆ. ಇದನ್ನು 'ಪರಾ ವಿದ್ಯೆ' ಎಂದು ಮುಂಡಕೋಪನಿಷತ್ತು ಕರೆಯುತ್ತದೆ. ಈ ಅರಿವು ಲಭಿಸುವುದು ಉಳಿದ ಅರಿವುಗಳನ್ನು ಪಡೆಯುವಂತೆ, ಪುಸ್ತಕಗಳನ್ನು ಓದುವುದರಿಂದ ಅಥವಾ ಪಾಠ ಕೇಳುವುದರಿಂದ ಅಲ್ಲ. ಯಾರು ಅಂತಹ ಮಹತ್ತಾದ ವಿದ್ಯೆಯನ್ನು ಈಗಾಗಲೇ ಪಡೆದಿದ್ದಾನೋ ಅಂಥವನ ಮಾರ್ಗದರ್ಶನದಿಂದ, ಅವನ ಮಾತಿನಂತೆ ಇಡೀ ಜೀವನವನ್ನೇ ಶಿಸ್ತಿನ ಕ್ರಮಕ್ಕೆ ಒಳಪಡಿಸಿ ಸಾಧನೆ ಮಾಡುವುದರಿಂದ ಅತಿ ಶ್ರೇಷ್ಠವಾದ ಈ ಅರಿವಿಗೆ (ಇದು ಅತಿ ಶ್ರೇಷ್ಠವಾದ ವಿದ್ಯೆಯಾದದ್ದರಿಂದಲೇ ಇದನ್ನು 'ಪರಾ' ಅಂದರೆ ಹೆಚ್ಚಿನದು ಎನ್ನಲಾಗಿದೆ) ಕೊಡಬೇಕಾದ ಬೆಲೆ ಅದು — ಇಡೀ ಜೀವನವನ್ನೇ ಸಮರ್ಪಿಸುವುದು. ಹೀಗೆ ಪ್ರಾಪಂಚಿಕ ವಿದ್ಯೆ, ಅಧ್ಯಾತ್ಮ ವಿದ್ಯೆ ಎಂದು ಅರಿವಿನಲ್ಲಿ ಎರಡು ಬಗೆ ಎಂದು ಉಪನಿಷತ್ತು ಹೇಳಿದೆ; ಎಲ್ಲ ಜ್ಞಾನಶಾಖೆಗಳೂ, ಕೊನೆಗೆ ಸ್ವತಃ ತಾನೇ ಯಾವುದರ ಭಾಗವಾಗಿದೆಯೋ ಅಂತಹ ವೇದಗಳೂ 'ಅಪರಾ ವಿದ್ಯೆ'ಯಲ್ಲೇ ಸೇರುತ್ತದೆ ಎನ್ನುತ್ತದೆ ಉಪನಿಷತ್ತು. ಅಂದರೆ, 'ಪರಾ ವಿದ್ಯೆ'ಯೆಂಬುದು ವೇದಗಳಿಗೂ ಮೀರಿದ ಜ್ಞಾನ; ಅದು ಆಧ್ಯಾತ್ಮಿಕ ಅನುಭವ.

ಲೌಕಿಕ ಅರಿವಿನಾಚೆಗೆ

ಹಾಗಿದ್ದರೆ, ಲೌಕಿಕ ಅರಿವಿಗೆ ಏನೂ ಬೆಲೆಯಿಲ್ಲವೆ? ಆಧ್ಯಾತ್ಮಿಕ ಜ್ಞಾನದ ಮಹತ್ವವನ್ನು ಹೇಳುವ ಭರದಲ್ಲಿ ಲೌಕಿಕ ಜ್ಞಾನಗಳನ್ನು ನಮ್ಮವರು ಕಡೆಗಣಿಸಿದಂತಾಗಲಿಲ್ಲವೆ? ನಮ್ಮ ದೇಶ ವಿಜ್ಞಾನ-ತಂತ್ರಜ್ಞಾನಗಳಲ್ಲಿ ಉಳಿದ ದೇಶಗಳಿಗಿಂತ ಹಿಂದಿರುವ ಸಂದರ್ಭದಲ್ಲಿ ಇಂತಹ ವಿಚಾರಗಳು ಇನ್ನಷ್ಟು ಹಿನ್ನಡೆಗೆ ಕಾರಣವಾಗಲಾರವೆ?

ಈ ಪ್ರಶ್ನೆಗೆ ಉತ್ತರಿಸುವ ಮುನ್ನ ಲೌಕಿಕ-ಆಧ್ಯಾತ್ಮಿಕ ಎಂಬ ಈ ಎರಡು ಪ್ರಪಂಚಗಳು ಹೇಗಿವೆ, ಹೇಗೆ ಇವುಗಳನ್ನು ಗ್ರಹಿಸಬೇಕು ಎಂಬುದನ್ನು ಕುರಿತು ತುಸು ಚಿಂತಿಸೋಣ. ಈ ಬದುಕು ನಶ್ವರ, ಈ ಪ್ರಪಂಚ ನಿಸ್ಸಾರ, ಇದಕ್ಕೆ ಆಧಾರವಾದ ಪರತತ್ತ್ವವೇ ಎಲ್ಲದಕ್ಕಿಂತ ಮುಖ್ಯ ಹಾಗೂ ಅದನ್ನು ಕಂಡುಕೊಳ್ಳುವುದೇ ಧ್ಯೇಯವಾಗಬೇಕು — ಇದು ಭಾರತದಲ್ಲಿ ಹುಟ್ಟಿದ (ಹಿಂದೂ, ಬೌದ್ಧ, ಜೈನ) ಧರ್ಮಗಳಲ್ಲಿ ಕಂಡುಬರುವ ಸಮಾನ ಅಂಶ. ಆದರೆ ಇದು ಹೇಗೆ ಸಾಧ್ಯವಾಗುವುದು? ಪ್ರಪಂಚವನ್ನು ಕಡೆಗಣಿಸುವುದರಿಂದಲೆ? ಇದು ನಿಸ್ಸಾರವೆಂದು ಏನೂ ಮಾಡದೆ ಸುಮ್ಮನಿರುವುದರಿಂದಲೆ? ನಮ್ಮ ಪರಂಪರೆ ಎಲ್ಲೂ ಈ ಬಗೆಯ ಜಡತ್ವವನ್ನು ಬೋಧಿಸುವುದಿಲ್ಲ. ಬದಲಾಗಿ, ಈ ಪ್ರಪಂಚದಲ್ಲಿ ಪರಿಪೂರ್ಣವಾಗಿ ಬದುಕಬೇಕು; ಈ ಪ್ರಪಂಚದ ವಿಷಯವಾಗಿ ಎಷ್ಟು ಅಗತ್ಯವೋ ಅಷ್ಟನ್ನು ಅರಿತುಕೊಂಡು, ಅಲ್ಲಿಗೆ ನಿಲ್ಲದೆ, ಅದನ್ನು ಮೀರಿ ಹೋಗಬೇಕು — ಇದು ನಮ್ಮ ಶಾಸ್ತ್ರಗಳು ಸಾರುವ ಬೋಧನೆ.[೧] ಲೌಕಿಕ ಜೀವನದ ತಳಹದಿಯ ಮೇಲೆ ನಿಂತು, ದೃಢವಾದ ಮೆಟ್ಟಿಲನ್ನೇರಿ ಹೋಗಿ ಪಾರಮಾರ್ಥಿಕ ತತ್ತ್ವವನ್ನು ಹೊಂದಬೇಕು ಎಂಬುದನ್ನು ಎಲ್ಲ ಪರಂಪರೆಯ ತತ್ತ್ವಗಳೂ ಒತ್ತಿ ಹೇಳುತ್ತವೆ. ಈ ಹಿನ್ನೆಲೆಯಲ್ಲಿ , ಲೌಕಿಕ ಜೀವನಕ್ಕೆ ಅಗತ್ಯವಾದ ವಿವಿಧ ಲೌಕಿಕ ಜ್ಞಾನಗಳೂ ಅಷ್ಟೇ ಮುಖ್ಯ; ಆದರೆ ಅಲ್ಲೇ ನಿಲ್ಲಬಾರದು, ಅವುಗಳನ್ನು ಮೀರಿ ಪಾರಮಾರ್ಥಿಕ ಜ್ಞಾನವನ್ನು ಪಡೆಯಬೇಕು ಎಂಬುದು ಅತ್ಯಂತ ಪ್ರಧಾನವಾದ ವಿಚಾರ. ಅಂತಿಮ ಗುರಿ ಪರಮಾರ್ಥವೇ; ಲೋಕವನ್ನು ಮೀರಿದ ಆಧ್ಯಾತ್ಮಿಕ ಸತ್ಯಗಳೇ ಎಲ್ಲಕ್ಕಿಂತ ಮುಖ್ಯ. ಏಕೆಂದರೆ ಈ ಪ್ರಪಂಚಕ್ಕೂ ಎಲ್ಲ ಲೌಕಿಕ ಜ್ಞಾನಗಳಿಗೂ ಅದೇ ಮೂಲ; ಅದನ್ನು ಅರಿಯುವುದರಿಂದ ಮಾತ್ರ ಪರಿಪೂರ್ಣತೆಯನ್ನು ಹೊಂದಬಹುದು.

ಅರಿವಿನ ಮಿತಿ

ಇದರ ನಡುವೆ, ಅರಿವೇ ಮಿತಿಯಾಗುವ ಒಂದು ವಿಚಿತ್ರ ಸನ್ನಿವೇಶವನ್ನು ನಾವು ಗಮನಿಸಬೇಕು. ಎಲ್ಲ ಜ್ಞಾನವೂ ಒಂದಲ್ಲ ಒಂದು ರೀತಿಯ ವರ್ಗೀಕರಣವೆನ್ನುತ್ತಾರೆ. ಮೆದುಳಿನ ಒಂದೊಂದು ಜ್ಞಾನಕ್ಕೂ ಒಂದೊಂದು ವಿಭಾಗವಿರುತ್ತದೆ; ನಾವು ಗ್ರಹಿಸುವ ಜ್ಞಾನವನ್ನೆಲ್ಲ ಆಯಾ ವಿಭಾಗಗಳಿಗೆ ತುರುಕುತ್ತವೆ. ಒಂದು ವೇಳೆ ಅದಕ್ಕೆ ಸಂಬಂಧಿಸಿದ ವಿಭಾಗವೇ ಇಲ್ಲದಿದ್ದರೆ ಮೆದುಳು ಹೊಸ ವಿಭಾಗವನ್ನು ತೆರೆಯತ್ತದೆ — ಇದು ಈಗಾಗಲೇ ಎಲ್ಲರೂ ತಿಳಿದಿರುವ ವಿಚಾರ. ಹೀಗೆ ಜ್ಞಾನದ ಭಂಡಾರ ಮನುಷ್ಯನ ಮನಸ್ಸಿನಲ್ಲಿ ವಿಸ್ತಾರವಾಗುತ್ತ ಹೋಗುವುದಲ್ಲವೆ? ಗ್ರಂಥಗಳು ಸಹಸ್ರ, ಲಕ್ಷ ಸಂಖ್ಯೆಯಲ್ಲಿ ಹೆಚ್ಚಾದಂತೆ ಗ್ರಂಥಾಲಯ ಬೆಳೆಯುವುದಲ್ಲವೆ? ಇಲ್ಲಿ ಮಿತಿ ಏನು ಬಂತು? ಪ್ರಶ್ನೆ ತಾರ್ಕಿಕವೇ. ಆದರೆ ಜ್ಞಾನವೂ ಒಂದು ಮಿತಿಯಾಗುವುದು ಒಂದು ವಿಭಿನ್ನ ಸಂದರ್ಭದಲ್ಲಿ, ವಿಭಿನ್ನ ದೃಷ್ಟಿಕೋನದಿಂದ.

---

೧ **'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'** (ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು) *(ಈಶ., ೨)*; **'ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋऽಶ್ನುತೇ'** (ಕರ್ಮಗಳನ್ನು ಆರಂಭಿಸದೆ ಇರುವುದರಿಂದ ಮನುಷ್ಯನು ನೈಷ್ಕರ್ಮ್ಯವನ್ನು ಹೊಂದುವುದಿಲ್ಲ.' *(ಗೀತಾ, ೩.೪)* **'ಈಸಬೇಕು ಇದ್ದು ಜೈಸಬೇಕು'** *(ಪುರಂದರದಾಸರು)*

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ಹೊರಗಿನಿಂದ ಯಾವ ಜ್ಞಾನವೂ ಬರುವುದಿಲ್ಲ. ಅದೆಲ್ಲವೂ ಒಳಗೇ ಇರುವುದು.'' *(ಕೃತಿಶ್ರೇಣಿ, ಸಂ.೧, ಪು. ೨೯)* ವೇದಾಂತ ತತ್ತ್ವಗಳ ಪ್ರಕಾರ ಮನುಷ್ಯನ ಮೂಲ ಸ್ವಭಾವವೇ ಪರಿಪೂರ್ಣತೆ. ಪರಬ್ರಹ್ಮ ವಸ್ತುವೇ ಅವನ ನೈಜಸ್ವರೂಪ. ಅವಿದ್ಯೆ, ಕಾಮ, ಕರ್ಮ ಇವುಗಳ ಕಾರಣದಿಂದ ಅವನು ತನ್ನ ನಿಜಸ್ವಭಾವವನ್ನು ಮರೆತು, ಜನ್ಮ ಜನ್ಮಾಂತರದ ಸಂಸಾರಚಕ್ರದಲ್ಲಿ ಬಂಧಿತನಾಗಿದ್ದಾನೆ. ಆದರೆ ಅವನ ಅಂತರಂಗದಲ್ಲಿ ಅಡಗಿರುವ ಚೈತನ್ಯವು ಪರಬ್ರಹ್ಮನ ಒಂದು ಕಿಡಿ; ಅದರಿಂದಲೇ ಅವನು ಎಲ್ಲವನ್ನೂ ಅರಿತುಕೊಳ್ಳ ಬಲ್ಲನು, ಎಲ್ಲ ಕ್ರಿಯೆಗಳನ್ನೂ ಮಾಡಬಲ್ಲನು. ಆದರೆ ಅವನು ತನ್ನ ನಿಜಸ್ವರೂಪವನ್ನು ಅರಿಯುವ ಬದಲು, ಪ್ರಪಂಚದಲ್ಲೇ ತನ್ನ ಜ್ಞಾನವನ್ನು ವಿಸ್ತರಿಸುತ್ತ ಹೋದರೆ, ಅವನು ಅಲ್ಲೇ ತೊಳ ಲಾಡುತ್ತಾನೆ. ನಿಜವಾದ ಅರಿವೆಂದರೆ ತನ್ನ ನೈಜಸ್ವರೂಪದ ಅರಿವು; ಅದೇ ಅಧ್ಯಾತ್ಮಜ್ಞಾನ ಅಥವಾ ಪರಾವಿದ್ಯೆ. ಪ್ರಾಪಂಚಿಕ ಜ್ಞಾನ ವಿಸ್ತಾರವಾಯಿತೆಂದರೆ, ತನ್ನ ನೈಜಸ್ವಭಾವದಿಂದ ದೂರ ಸರಿದಂತೆ. ಲೌಕಿಕ ಜ್ಞಾನ ಹೆಚ್ಚು ಹೆಚ್ಚು ನಮ್ಮಲ್ಲಿ ತುಂಬಿದಷ್ಟೂ ಆಂತರಿಕ ಜ್ಞಾನ ಕಡಿಮೆಯಾದಂತೆ. ಹೀಗಾಗಿ, ಉಳಿದೆಲ್ಲ ಅರಿ ವನ್ನೂ ತ್ಯಜಿಸಿ, ಆತ್ಮಜ್ಞಾನವೊಂದನ್ನು ಮಾತ್ರ ಉಳಿಸಿಕೊಳ್ಳುವುದು ಆಧ್ಯಾತ್ಮಿಕ ಸಾಧನೆ. 'ಪ್ರತ್ಯಯ' ಎಂದು ವೇದಾಂತದಲ್ಲೂ, 'ವೃತ್ತಿ' ಎಂದು ಯೋಗದಲ್ಲೂ ಕರೆಯುವ ಮಾನಸಿಕ ಆಲೋ ಚನೆಯ ಕ್ರಿಯೆಯನ್ನು ಒಂದು ಶಿಸ್ತಿಗೆ ಒಳಪಡಿಸಿ, ಅದನ್ನು ಒಂದೇ ಕಡೆಗೆ ಹರಿಯಬಿಟ್ಟು (ಇದಕ್ಕೆ 'ಏಕಾಗ್ರತೆ' ಎನ್ನುತ್ತೇವೆ) ಅದರಲ್ಲೇ ನಿರಂತರ ನೆಲೆಸುವುದು ಧ್ಯಾನ ಅಥವಾ ಯೋಗ. ಜಪಸಾಧನೆ, ಪೂಜೆ-ಪುನಶ್ಚರಣ, ಪ್ರಾರ್ಥನೆ, ಧ್ಯಾನಗಳ ಗುರಿ ಕೂಡ ಇದೇ; 'ವೃತ್ತಿ' ಅಥವಾ ಆಲೋಚನೆಗಳನ್ನು ಕಡಿಮೆ ಮಾಡಿ, ಅದನ್ನು ಒಂದೇ ಆಗಿಸುವುದು. ಹೀಗೆ, ಹಲವು ಜ್ಞಾನಗಳ ಮೂಲಕ ಹಲವೆಡೆ ಚೆದುರಿಹೋದ ಮನಸ್ಸನ್ನು ಒಂದೇ ಜ್ಞಾನದತ್ತ ಮರಳಿಸುವುದು; ಕೊನೆಗೆ ಆ ಒಂದು ಜ್ಞಾನವು ಪರಮಜ್ಞಾನವನ್ನು ಹೊಂದುವುದು — ಇದೇ ಎಲ್ಲ ಸಾಧನೆಗಳ ಗುರಿ.

ಈ ದೃಷ್ಟಿಕೋನದಲ್ಲಿ ಮಾತ್ರ ಅರಿವು — ಅಂದರೆ ಲೌಕಿಕ ಜ್ಞಾನ ಒಂದು ಮಿತಿಯಾಗುವುದು. ಇದನ್ನು ಮೀರಿ ಹೋಗಿ ಪಡೆಯುವ ಉನ್ನತ ಹಂತದ ಅರಿವು ಮಿತಿಯಾಗುವುದಿಲ್ಲ ; ಅದು ಅನಂತವಾಗುವುದು. 'ಯಾವುದನ್ನು ಅರಿತರೆ ಉಳಿದೆಲ್ಲ ವನ್ನೂ ಅರಿಯಬಹುದೋ' ಅಂತಹ ನಿಜವಾದ ವಿದ್ಯೆ ಅದು.

'ಅರಿವೇ ಗುರು'

ಈ ಹಂತದಲ್ಲಿ ನಮಗೆ ಗುರುವಿನ ಮಹತ್ವ ಮುಖ್ಯವಾಗು ತ್ತದೆ. ಈ ಲೋಕವನ್ನು ಮೀರಿದ, ಸಾಮಾನ್ಯರ ಗ್ರಹಿಕೆಯನ್ನು ಮೀರಿದ ಪಾರಮಾರ್ಥಿಕ ಜ್ಞಾನವನ್ನು ಪಡೆಯುವುದು ಹೇಗೆ? ಅದನ್ನು ಕಲಿಸಿಕೊಡಬಲ್ಲ ವ್ಯಕ್ತಿಗಳು ಇದ್ದಾರೆಯೆ? ಎಲ್ಲರೂ ಇದನ್ನು ಪಡೆಯಬಹುದೆ? ಕೆಲವೊಂದು ಆಧ್ಯಾತ್ಮಿಕ ಸಾಧನೆಗಳ ಮೂಲಕ ಈ ಜ್ಞಾನವನ್ನು ಎಲ್ಲರೂ ಪಡೆಯಬಹುದು. ಪರಾವಿದ್ಯೆ, ಯೋಗ, ಸಾಧನೆ ಎಂದೆಲ್ಲ ಶಾಸ್ತ್ರಗಳು ಕರೆದಿರುವುದು ಈ ವಿಧಿ ವಿಧಾನಗಳನ್ನೇ. ಹಲವು ಕಾಲಘಟ್ಟಗಳಲ್ಲಿ ಇಂತಹ ಸಾಧನೆಗಳ ಮೂಲಕ ಅಧ್ಯಾತ್ಮ ಜ್ಞಾನವನ್ನು ಪಡೆದ ಮಹಾತ್ಮರುಗಳು ಆಗಿ ಹೋಗಿದ್ದಾರೆ; ಈಗಲೂ ಪ್ರಪಂಚದಲ್ಲಿ ಅವರು ಇರಬಹುದು. ಅವರೇ ಇಂತಹ ಜ್ಞಾನವನ್ನು ನೀಡಬಲ್ಲ ಗುರುಗಳು. ಪ್ರತಿ ಯೊಂದು ಜ್ಞಾನವನ್ನು ಪಡೆಯಲು ಕೂಡ ವಿದ್ಯಾರ್ಥಿ ದೈಹಿಕ ವಾಗಿ, ಮಾನಸಿಕವಾಗಿ ಸ್ಥಿರನಾಗಬೇಕು — ಆಗ ಮಾತ್ರ ಅವನಿಗೆ ಅದಕ್ಕೆ ಪ್ರವೇಶ ದೊರಕುವುದು. ಅದೇ ರೀತಿ, ಅಧ್ಯಾತ್ಮಿಕ ಜ್ಞಾನ ವನ್ನು ಹೊಂದಲು ಒಬ್ಬ ವ್ಯಕ್ತಿ ಸಿದ್ಧನಾಗಬೇಕು. ಆಗ ತಾನಾ ಗಿಯೇ ಅವನು ಅಂತಹ ಜ್ಞಾನದತ್ತ, ಅದನ್ನು ಪಡೆದ ಗುರುವಿನತ್ತ ಆಕರ್ಷಿತನಾಗುವನು. ನಮ್ಮ ಆಧ್ಯಾತ್ಮಿಕ ಪರಂಪರೆ ಇದನ್ನು ಸ್ಪಷ್ಟವಾಗಿ ಹೇಳಿದೆ. ''ದೈವಾನುಗ್ರಹದಿಂದ ಮಾತ್ರವೇ ಮನುಷ್ಯ ಜನ್ಮ, ಮೋಕ್ಷ ಪಡೆಯುವ ಇಚ್ಛೆ ಹಾಗು ಯೋಗ್ಯ ಗುರುವಿನ ಸಂಪರ್ಕ ದೊರಕುವುದು'' ಎನ್ನುತ್ತಾರೆ ಶ್ರೀಶಂಕರರು.[೨]

ಇನ್ನೊಂದು ಹಂತದಲ್ಲಿ , ಸಾಧನೆಯಲ್ಲಿ ಮುಂದುವರಿದ ಸಾಧಕನ ಬಗ್ಗೆ ಹೇಳುತ್ತ ಶ್ರೀರಾಮಕೃಷ್ಣರು, 'ಒಂದು ಹಂತದಲ್ಲಿ ಮನಸ್ಸೇ ಗುರುವಾಗುವುದು' ಎನ್ನುತ್ತಾರೆ. ಆರಂಭದಲ್ಲಿ ಗುರು ವಿನ ಮಾರ್ಗದರ್ಶನದಂತೆ ನಡೆಯುವ ಶಿಷ್ಯನು, ಮುಂದೆ ತನ್ನ ಅಂತರಂಗವೇ ತನಗೆ ದಾರಿ ತೋರುವುದನ್ನು ಕಾಣುತ್ತಾನೆ. ಆಗ ಅವನಿಗೆ ತನ್ನ ಮನಸ್ಸೇ ಗುರುವಾದಂತೆ, ತನ್ನ ಮನಸ್ಸೆಲ್ಲವೂ ಗುರುಸ್ಮರಣೆಯಿಂದ ಪವಿತ್ರವಾದಂತೆ ಭಾಸವಾಗುತ್ತದೆ. ಎಲ್ಲ ಉನ್ನತ ಜ್ಞಾನಕ್ಕೂ, ಆಧ್ಯಾತ್ಮಿಕ ಅನುಭವಗಳಿಗೂ ತನ್ನ ಮನಸ್ಸು ಒಲಿಯಬೇಕು. ತನ್ನ ಅಂತರಂಗದ ಕೀಲಿಕೈ ತನ್ನಲ್ಲೇ ಇದೆ — ಅದನ್ನು ತೆರೆಯದೆ ಏನೂ ದೊರಕದು ಎಂಬ ಮಾತೊಂದಿದೆ. ಇವೆಲ್ಲ ಸೂಚಿಸುವುದು ಅದೊಂದೇ ತತ್ತ್ವವನ್ನು - 'ಎಲ್ಲ ಅರಿವೂ ನಿನ್ನಲ್ಲಿದೆ. ಅದನ್ನು ಅರಿತುಕೋ - ನಿನಗೆಲ್ಲವೂ ದೊರಕುವುದು.' ಅಂತಹ ಜ್ಞಾನವನ್ನು ಅಂತಿಮವಾಗಿ ನೀನೇ ಕಂಡುಕೊಳ್ಳಬೇಕು. ಗುರು ದಾರಿ ತೋರಿಸುತ್ತಾನೆ; ನಡೆಯುವವನು ನೀನೇ. ಅಂತ ರಂಗದ ಅರಿವು ಪ್ರಕಾಶಗೊಂಡಾಗ ಶಿಷ್ಯನು ಅರಿತುಕೊಳ್ಳುತ್ತಾನೆ — ಈ ಅರಿವೇ ಗುರು ಎಂದು.

---

೨ **'ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ'** — *ವಿವೇಕ ಚೂಡಾಮಣಿ, ೩.*

ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

೨	ಭಾನುವಾರ	ಶ್ರೀಕೃಷ್ಣ ಜನ್ಮಾಷ್ಟಮಿ
೬	ಗುರುವಾರ	ಏಕಾದಶಿ
೮	ಶನಿವಾರ	ಸ್ವಾಮಿ ಅದ್ವೈತಾನಂದ ಜಯಂತಿ
೧೩	ಗುರುವಾರ	ಶ್ರೀ ವಿನಾಯಕ ಚತುರ್ಥಿ
೨೨	ಬುಧವಾರ	ಏಕಾದಶಿ